ತಪ್ಪಿಸಿಕೊಂಡಿದ್ದಾರೆ. ಸಿನಿಮಾ ಎಂದರೆ ಚಕಚಕನೆ ಸಾಗಬೇಕು, ಲಂಬಿಸಿದರೆ ಎಳೆದಂತೆ ಆಗಿಬಿಡುತ್ತದೆ ಎಂಬಿತ್ಯಾದಿ ಸಿದ್ಧ ನಂಬಿಕೆಗಳನ್ನು ದಾಟಿದ್ದಾರೆ.

ಕೆಲವು ಉದಾಹರಣೆಗಳನ್ನು ನೋಡೋಣ:

ಒಂದು– ನಾಯಕ ಚಹಾ ಕುಡಿಯುತ್ತಾ ಬಯಲು ಕ್ಯಾಂಟೀನ್‌ನಲ್ಲಿ ಕುಳಿತಿದ್ದಾನೆ. ಸಿಗರೇಟಿನ ಹೊಗೆ ಉಗುಳುವ ಅವನ ಕೆಂದುಟಿ. ನೋಟ ದಿಢೀರನೆ ನಿರ್ದಿಷ್ಟ ವ್ಯಕ್ತಿಯ ಮೇಲೆ ಕೀಲಿಸುತ್ತದೆ. ಅದು ನಾಯಕಿ. ಸಹಪಾಠಿಗಳೊಟ್ಟಿಗೆ ಸಾಲಿನಲ್ಲಿ ಬರುತ್ತಿದ್ದಾಳೆ. ಅವಳು ಸಾಲಿನಲ್ಲಿ ಮೊದಲು ನಿಂತಿಲ್ಲ. ನಡುವೆ ಎಲ್ಲೋ ಇದ್ದಾಳೆ. ನಾಯಕ ಅವಳನ್ನೇ ನೋಡುತ್ತಿದ್ದಾನೆ ಎನ್ನುವುದು ಅವಳ ಸಹಪಾಠಿಗಳಿಗೂ ಗೊತ್ತಾಗುತ್ತದೆ. ನಾಯಕನ ಆಪ್ತಸ್ನೇಹಿತನಿಗೂ ತಿಳಿಯುತ್ತದೆ. ಹಿನ್ನೆಲೆಯಲ್ಲಿ ಬಾಂಬೆ ಜಯಶ್ರೀ ಕಂಠದ ಕರ್ನಾಟಕ ಶಾಸ್ತ್ರೀಯ ಸಂಗೀತ. ಒಂದು ಮಾತೂ ಇಲ್ಲ.

ಎರಡು–ನಾಯಕ ಮೂಳೆ ತಜ್ಞವೈದ್ಯನಾಗಿ ಸ್ನಾತಕೋತ್ತರ ಪದವಿ ಪಡೆದು ಬರುತ್ತಾನೆ. ಅವನ ಅಣ್ಣನ ಮದುವೆ. ತಿಂಗಳುಗಳ ನಂತರ ತನ್ನ ಪ್ರಿಯತಮೆಯನ್ನು ಕಾಣಲೆಂದು ಮೊದಲ ಬಾರಿಗೆ ಅವಳ ಮನೆಗೆ ಬರುತ್ತಾನೆ. ಅವಳು ತಲೆಗೆ ಸ್ನಾನ ಮಾಡಿ ತಯಾರಾಗಿದ್ದಾಳೆ. ಗೇಟಿನ ಹತ್ತಿರ ನಿಂತು ಕಾಯುತ್ತಿದ್ದಾಳೆ. ಎದುರುಗೊಂಡದ್ದೇ ಅವಳ ಮುಖ ಕಮಲ. ಅವನು ನಿಧಾನ ನಡೆದು ಬಂದು ಗೇಟಿನ ಬಳಿ ನಿಲ್ಲುತ್ತಾನೆ. ‘ಇದು ನಿನ್ನ ಮನೆಯಾ’ ಎನ್ನುತ್ತಾನೆ. ಅವಳು ಹೌದೆಂದು ತಲೆಯಾಡಿಸುತ್ತಾಳೆ. ‘ಚೆನ್ನಾಗಿದೆ’ ಎನ್ನುತ್ತಾನೆ. ಅವಳು ‘ಒಳಗೆ ಬಾ’ ಎಂದು ಕರೆಯುತ್ತಾಳೆ.

ಮೂರು–ಕಾಲೇಜಿನ ಡೀನ್ ಹೊಸ ವಿದ್ಯಾರ್ಥಿಗಳಿಗೆ ಗಂಭೀರವಾಗಿ ಬೋಧನೆ ಮಾಡುತ್ತಿರುತ್ತಾರೆ. ಆಗ ನಾಯಕ ಅವರನ್ನು ಕಾಣಲೆಂದು ಅದೇ ತರಗತಿಯ ಬಾಗಿಲ ಎದುರು ನಿಲ್ಲುತ್ತಾನೆ. ಫುಟ್‌ಬಾಲ್ ಆಡುವಾಗ ಜಗಳವಾಗಿ, ಕೋಪಾವೇಶದಿಂದ ಬೇರೆ ಕಾಲೇಜಿನ ವಿದ್ಯಾರ್ಥಿಗಳಿಗೆ ಮುಖ ಮೂತಿ ನೋಡದೆ ಹೊಡೆದು ಬಂದ ನಾಯಕನನ್ನು ಡೀನ್ ತಮ್ಮದೇ ಶೈಲಿಯಲ್ಲಿ ಪರಿಚಯಿಸುತ್ತಾರೆ. ಓದಿನಲ್ಲಿ ಅವನು ಕಾಲೇಜಿಗೇ ಮೊದಲಿಗನಾಗಿರುವುದು, ಕೋಪದಲ್ಲಿ ಕೂಡ ಎಲ್ಲರನ್ನೂ ಹಿಂದಿಕ್ಕಿರುವುದನ್ನು ಹೇಳುತ್ತಾರೆ. ‘ಕೋಪಕ್ಕೆ ಮನಸ್ಸು ಕೊಡುವವನು ಸರ್ಜನ್ ಆಗಿ, ಸರ್ಜಿಕಲ್ ಬ್ಲೇಡ್ ಕೈಲಿ ಹಿಡಿದರೆ ಅದು ಕೊಲೆಗೆ ಸಮಾನ’ ಎಂದು ವಿಮರ್ಶಿಸುತ್ತಾರೆ. ಅದಕ್ಕೆ ವಿದ್ಯಾರ್ಥಿ ಕಾರಣವಿಲ್ಲದೆ ತಾನು ಕುಪಿತನಾಗುವುದಿಲ್ಲವೆಂದೂ, ಮಾಡದ ತಪ್ಪಿಗೆ ಕ್ಷಮೆಯಾಚಿಸುವವರ ಪೈಕಿ ತಾನಲ್ಲವೆಂದೂ ಹೇಳುತ್ತಾನೆ.

ನಾಲ್ಕು– ಮದ್ಯದ ಅಮಲಿನಲ್ಲಿಯೇ ಹೆಡ್ ನರ್ಸ್‌ಗೆ ಮಾರ್ಗದರ್ಶನ ನೀಡಿ, ತುರ್ತು ಶಸ್ತ್ರಚಿಕಿತ್ಸೆ ಮಾಡಿಸುವ ನಾಯಕ ಆಮೇಲೆ ನ್ಯಾಯಾಲಯದ ಪ್ರಕರಣ ಎದುರಿಸಬೇಕಾಗುತ್ತದೆ. ವಿಶೇಷ ಕೋರ್ಟ್ ಕಲಾಪ ಏರ್ಪಾಟು ಮಾಡಿಸಿ, ಅವನನ್ನು ಆ ಸುಳಿಯಿಂದ ಹೊರತರಲು ಅವನ ಅಣ್ಣ ಹೆಣಗಾಡುತ್ತಾನೆ. ತಾನು ಶಸ್ತ್ರಚಿಕಿತ್ಸೆ ಮಾಡಿದಾಗ ಕುಡಿದಿರಲಿಲ್ಲ ಎಂದು ಒಂದು ಸುಳ್ಳು ಹೇಳಿಬಿಟ್ಟಿದ್ದರೆ ಪ್ರಕರಣ ಬಿದ್ದುಹೋಗುತ್ತಿತ್ತು. ಆದರೆ, ನಾಯಕ ತಾನು ಪ್ರತಿ ಶಸ್ತ್ರಚಿಕಿತ್ಸೆ ಮಾಡಿದಾಗಲೂ ಅಮಲಿನಲ್ಲಿಯೇ ಇದ್ದುದಾಗಿಯೂ, ಯಾವ ಶಸ್ತ್ರಚಿಕಿತ್ಸೆಯೂ ವಿಫಲವಾಗಿಲ್ಲವೆಂದೂ ಸತ್ಯ ಅರುಹುತ್ತಾನೆ.

ಸಿನಿಮಾದ ಫೋಕಲ್ ಪಾಯಿಂಟ್ ‘ಅರ್ಜುನ್ ರೆಡ್ಡಿ’. ಅವನಲ್ಲಿ ಸದ್ಗುಣಗಳಿರುವಂತೆ